# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಡಾ:ಚಂದ್ರಶೇಖರ ಬಸವರಾಜ ಪಾಟೀಲ್ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1328** |
| ಉತ್ತರಿಸಬೇಕಾದ ದಿನಾಂಕ | : | **17.12.2025** |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಬಡ ವಸತಿರಹಿತ ಜನರಿಗೆ ನಿವೇಶನ/ಮನೆ ನೀಡುವ ಸಲುವಾಗಿ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆಗಳಾವುವು ಹಾಗೂ ಯೋಜನೆಯ ಫಲಾನುಭವಿಗಳಾಗಲು ನಿಗದಿಪಡಿಸಿರುವ ಮಾನದಂಡಗಳೇನು: (ವಿವರ ನೀಡುವುದು) | ವಸತಿರಹಿತ ಅರ್ಹ ಬಡ ಕುಟುಂಬಗಳಿಗೆ ವಸತಿ/ನಿವೇಶನ ಕಲ್ಪಿಸಲು ಈ ಕೆಳಕಂಡ ಯೋಜನೆಗಳು ಜಾರಿಯಲ್ಲಿರುತ್ತವೆ.<br><br>**ರಾಜ್ಯ ಪುರಸ್ಕೃತ ವಸತಿ ಯೋಜನೆಗಳು:**<br><br>1. ಬಸವ ವಸತಿ ಯೋಜನೆ<br>2. ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ & ನಗರ)<br>3. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ & ನಗರ)<br>4. ವಾಜಪೇಯಿ ನಗರ ವಸತಿ ಯೋಜನೆ<br>5. 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ (ಬೆಂಗಳೂರು ನಗರದಲ್ಲಿ ಮಾತ್ರ)<br><br>**ಕೇಂದ್ರ ಪುರಸ್ಕೃತ ವಸತಿ ಯೋಜನೆಗಳು:**<br><br>1. ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)<br>2. ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ)<br><br>**ನಿವೇಶನ ಯೋಜನೆಗಳು :**<br><br>ಮುಖ್ಯ ಮಂತ್ರಿಗಳ ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆ<br><br>ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಸತಿ ಯೋಜನೆಗಳಡಿ ಆಯವ್ಯಯದಲ್ಲಿ ನೀಡಲಾಗುವ ಅನುದಾನಕ್ಕೆ ಅನುಗುಣವಾಗಿ ಮನೆಗಳ ಗುರಿಯನ್ನು ನಿಗದಿಪಡಿಸಿ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | **ಗ್ರಾಮೀಣ ವಸತಿ ಯೋಜನೆಗಳಡಿ ನಿಗದಿಪಡಿಸಿರುವ ಮಾನದಂಡಗಳು ಈ ಕೆಳಗಿನಂತಿದೆ:**<br><br>• ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ ) ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹ ಅರ್ಹರಾಗಿರುತ್ತಾರೆ.<br>• ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು, ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ.1,20,000/-ಕ್ಕಿಂತ ಕಡಿಮೆ ಇರಬೇಕು ನಗರ ಪ್ರದೇಶದಲ್ಲಿ ರೂ.2,00,000/-ರ ಒಳಗಿರಬೇಕು.<br>• ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದ್ಯಸರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.<br>• ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿ ದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)<br>• ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>• ಪ್ರಧಾನಮಂತ್ರಿ ಆವಾಸ್ ಯೋಜನೆ(ಗ್ರಾ)ಯಡಿ ವಸತಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದ Awaas Plus PWL ಪಟ್ಟಿಯಲ್ಲಿ ಹೆಸರು ಸೇರಿರಬೇಕು.<br>• ಡಾ॥ಬಿ.ಆರ್.ಅಂಬೇಡ್ಕರ್ ಆವಾಸ್ ಯೋಜನೆಯಡಿ ವಸತಿ ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಕ್ಕೆ ಸೇರಿದವರಾಗಿರಬೇಕು. ಈ ವರ್ಗದ ವಸತಿ ರಹಿತರಿಗೆ ಬೇಡಿಕೆ ಆಧಾರಿತವಾಗಿ ವಸತಿ ಕಲ್ಪಿಸಲಾಗುವುದು.<br><br>**ನಗರ ವಸತಿ ಯೋಜನೆಗಳಡಿ ನಿಗದಿಪಡಿಸಿರುವ ಮಾನದಂಡಗಳು ಈ ಕೆಳಗಿನಂತಿದೆ:**<br><br>• ಫಲಾನುಭವಿಯು ಬೇಡಿಕೆ ಸಮೀಕ್ಷೆಯಲ್ಲಿರಬೇಕು.<br>• ದೇಶದಾದ್ಯಂತ ಅವನ / ಅವಳ ಹೆಸರಿನಲ್ಲಿ ಯಾವುದೇ ಮನೆ ಇರಬಾರದು. |

| | | |
|---|---|---|
| | | • ನಗರ ವಸತಿ ಯೋಜನೆಯಡಿ ಆಯ್ಕೆಯಾಗುವ ಫಲಾನುಭವಿಗಳ ವಾರ್ಷಿಕ ಆದಾಯ 2 ಲಕ್ಷಕ್ಕಿಂತ ಕಡಿಮೆ ಇರಬೇಕು ಹಾಗೂ ಪ್ರಧಾನ ಮಂತ್ರಿ ಅವಾಸ್(ನಗರ) ರಡಿ ಆಯ್ಕೆಯಾಗುವ ಫಲಾನುಭವಿಗಳ ವಾರ್ಷಿಕ ಆದಾಯ 3 ಲಕ್ಷಕ್ಕಿಂತ ಕಡಿಮೆ ಇರಬೇಕು.<br>• ಇತರೇ ವಸತಿ ಯೋಜನೆಗಳಲ್ಲಿ ಈಗಾಗಲೇ ಸಹಾಯಧನ ಪಡೆದಿರಬಾರದು.<br>• ಫಲಾನುಭವಿಯು ಸ್ವಂತ ನಿವೇಶನ ಹೊಂದಿರಬೇಕು. |
| ಆ) | ಸರ್ಕಾರದಿಂದ ನೈಜವಾಗಿ ನೀಡಿರುವ ಹಕ್ಕುಪತ್ರ ನೋಂದಣಿಯಾಗದೇ ಇರುವ ಸಂದರ್ಭದಲ್ಲಿ ಹಕ್ಕುಪತ್ರ ಪಡೆದ ಮಾಲೀಕ ನಿಧನರಾದ ಸಂದರ್ಭದಲ್ಲಿ ಕುಟುಂಬದ ವಾರಸುದಾರರಿಗೆ ಮಾಲೀಕತ್ವ ಅನ್ವಯಿಸುವಾಗ ಕೈಗೊಳ್ಳಬೇಕಾದ ಕ್ರಮಗಳೇನು: ಹಕ್ಕುಪತ್ರ ನೋಂದಣಿಯಾಗಲು ಅವಕಾಶ ಕಲ್ಪಿಸಲಾಗುವುದೇ: | ಸರ್ಕಾರದಿಂದ ನೈಜವಾಗಿ ನೀಡಿರುವ ಹಕ್ಕುಪತ್ರ ನೋಂದಣಿಯಾಗದೇ ಇರುವ ಸಂದರ್ಭದಲ್ಲಿ ಹಾಗೂ ಹಕ್ಕುಪತ್ರ ಪಡೆದ ಮೂಲ ಫಲಾನುಭವಿ ಮರಣ ಹೊಂದಿರುವ ಪ್ರಕರಣಗಳಲ್ಲಿ ನಿವೇಶನ ಮಾಲೀಕತ್ವದ ಹಕ್ಕನ್ನು ಮರಣ ಹೊಂದಿದ ಫಲಾನುಭವಿಯ ತತ್‌ಕ್ಷಣದ ವಾರಸುದಾರರು/ನೇರ ವಾರಸುದಾರರಿಗೆ ವರ್ಗಾಯಿಸುವಂತೆ ಅರ್ಜಿದಾರರು ಪೂರಕ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಲ್ಲಿ ಮರಣ ಹೊಂದಿರುವ ಫಲಾನುಭವಿಯ ವಾರಸುದಾರರಿಗೆ ನಿವೇಶನ/ಹಕ್ಕುಪತ್ರ ಹಂಚಿಕೆ ಮಾಡುವಂತೆ ಜಿಲ್ಲಾಧಿಕಾರಿಗಳು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸುತ್ತಾರೆ. ಮರಣ ಹೊಂದಿರುವ ನೇರ ವಾರಸುದಾರರ ಹೆಸರಿಗೆ ಹಕ್ಕುಪತ್ರ ನೊಂದಣಿಗೆ ಕ್ರಮವಹಿಸುವಂತೆ ಸಕ್ಷಮ ಪ್ರಾಧಿಕಾರವು ಉಪ ನೊಂದಣಾಧಿಕಾರಿಗಳಿಗೆ ನೀಡುವ ನಿರ್ದೇಶನದಂತೆ ನೇರ ವಾರಸುದಾರರ ಹೆಸರಿಗೆ ನೊಂದಣಿಗೆ ಕ್ರಮವಹಿಸಲಾಗುತ್ತದೆ. |
| ಇ) | ಕೆಲವೊಂದು ಹಕ್ಕುಪತ್ರಗಳಲ್ಲಿ ಪರಭಾರೆ ಮಾಡಲೇಬಾರದು ಎಂದು ಷರತ್ತು ವಿಧಿಸಿರುವುದು ನಿಜವೇ; ಆದಾಗ್ಯೂ ಅವರ ಆರ್ಥಿಕ ಸಂಕಷ್ಟಗಳಿಗೆ 30-40 ವರ್ಷಗಳಾದ ನಂತರ ನಿವೇಶನ ಪರಭಾರೆ ಮಾಡಲು ಅವಕಾಶ ಇದೆಯೇ; ಇಲ್ಲದಿದ್ದಲ್ಲಿ, ಅವಕಾಶ ಕಲ್ಪಿಸಲಾಗುವುದೇ: | ಆಶ್ರಯ ಯೋಜನೆಯಡಿ ಮಂಜೂರಾದ ನಿವೇಶನವನ್ನು 20 ವರ್ಷಗಳ ಅವಧಿಯವರೆಗೆ ಬೇರೆ ಯಾರಿಗೂ ಪರಭಾರೆ ಮಾಡುವಂತಿಲ್ಲ ಹಾಗೂ ಅದರಲ್ಲಿಯ ತಮ್ಮ ಹಕ್ಕುಗಳನ್ನು ಬೇರೆಯವರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ: ವಇ 2 ಹೆಚ್‌ಎಹೆಚ್ 2022 ದಿನಾಂಕ: 28.01.2022 ರಲ್ಲಿ ವಿವಿಧ ವಸತಿ ಯೋಜನೆಗಳಡಿ ಸ್ವಂತ ನಿವೇಶನದಲ್ಲಿ ಹಾಗೂ ಸರ್ಕಾರದಿಂದ ನಿವೇಶನ ಪಡೆದು ಸಾಲ/ ಸಹಾಯಧನ/ವೈಯಕ್ತಿಕ ಅನುದಾನದಿಂದ ಮನೆ ನಿರ್ಮಿಸಿಕೊಂಡು ವಾಸವಾಗಿದ್ದು 10 ವರ್ಷಗಳ ಅವಧಿ ಪೂರ್ಣಗೊಳಿಸಿದ ನಂತರ ಮನೆ/ನಿವೇಶನದ ಅಡಮಾನವನ್ನು ಡೀಮ್ಡ್ ರಿಲೀಸ್ ಎಂದು ಪರಿಗಣಿಸಿ ಆರ್.ಟಿ.ಸಿ./ಆಸ್ತಿವಹಿಯಲ್ಲಿ ಋಣಮುಕ್ತಗೊಳಿಸುವ ಬಗ್ಗೆ ವಿವರಿಸಲಾಗಿದೆ. |

| | | |
|---|---|---|
| ಈ) | ಬೆಂಗಳೂರು ಉತ್ತರ ತಾಲ್ಲೂಕಿನ ಕಡಬಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನೀಡಿರುವ ನಿವೇಶನಗಳ ಹಕ್ಕುಪತ್ರಗಳ ವಿವರ ಮತ್ತು ಎಷ್ಟು ವರ್ಷಗಳ ನಂತರ ಪರಭಾರೆ ಮಾಡಬಹುದೆಂಬ ಷರತ್ತನ್ನು ವಿಧಿಸಲಾಗಿದೆ: (ದಾಖಲೆ ಒದಗಿಸುವುದು) ಹಾಗೂ ಹಕ್ಕುಪತ್ರ ಪಡೆದವರು ನಿವೇಶನ ಪರಭಾರೆ ಮಾಡಿದ್ದಲ್ಲಿ, ಅವರ ವಿವರಗಳನ್ನು ಹೆಸರು, ಪರಭಾರೆ ದಿನಾಂಕವಾರು ನೀಡುವುದು; | ಬೆಂಗಳೂರು ಉತ್ತರ ತಾಲ್ಲೂಕಿನ ಕಡಬಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನಿವೇಶನ ಹಂಚಿಕೆಗೆ 2004-05 ನೇ ಸಾಲಿನಿಂದ ಈವರೆಗೂ ಒಟ್ಟು **469** ಹಕ್ಕುಪತ್ರಗಳನ್ನು ನಿಗಮದಿಂದ ನೀಡಲಾಗಿದೆ. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆ ಇವರು ದಿನಾಂಕ:09.12.2025 ರ ಪತ್ರದಲ್ಲಿ ವರದಿ ಮಾಡಿರುವಂತೆ ಹಕ್ಕುಪತ್ರ ಪಡೆದವರ ಪೈಕಿ, ನಿವೇಶನ ಪರಭಾರೆ ಮಾಡಿದವರ ಒಟ್ಟು 11 ಮೂಲ ಫಲಾನುಭವಿಗಳ ವಿವರ **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಉ) | ಹಕ್ಕುಪತ್ರ ಪಡೆದ ಮಾಲೀಕರಿಂದ ನಿವೇಶನ ಖರೀದಿಸಿದವರು ತದನಂತರ ಆ ನಿವೇಶನವನ್ನು ಪರಭಾರೆ ಮಾಡಬಹುದೇ: ಹಕ್ಕುಪತ್ರ ನೀಡಿದ 25-30 ವರ್ಷಗಳಾದ ತರುವಾಯ ಮೂಲ ಹಕ್ಕುಪತ್ರ ಪಡೆದವರು ಆರ್ಥಿಕ ಸಂಕಷ್ಟ ಪರಿಸ್ಥಿತಿಯಲ್ಲಿ ಹಕ್ಕುಪತ್ರದ ನಿವೇಶನಗಳನ್ನು ನೋಂದಣಿ ಮೂಲಕ ಇತರರಿಗೆ ಪರಭಾರೆ ಮಾಡಿದ್ದ ಸಂದರ್ಭದಲ್ಲಿ ಖರೀದಿಸಿದ್ದ ಮಾಲೀಕರ ಪರವಾಗಿ ಎಲ್ಲಾ ಸರ್ಕಾರಿ ದಾಖಲೆಗಳಿದ್ದ ಸಂದರ್ಭದಲ್ಲಿ ಅಂತಹ ನಿವೇಶನಗಳನ್ನು ಮತ್ತೊಬ್ಬರಿಗೆ ಮಾರಾಟ ಮಾಡಲು ಅವಕಾಶ ಇದೆಯೇ? | ಸರ್ಕಾರದ ಆದೇಶ ಸಂಖ್ಯೆ: ವಇ 54 ಹೆಚ್‌ಎಹೆಚ್ 2020, ದಿನಾಂಕ: 04.09.2020 ರಂತೆ 2020-21 ನೇ ಸಾಲಿನ ಅಯವ್ಯಯ ಭಾಷಣದ ಕಂಡಿಕೆ-95 ರಲ್ಲಿನ ಘೋಷಣೆಯಂತೆ ಫಲಾನುಭವಿಯು ವಿವಿಧ ವಸತಿ ಯೋಜನೆಗಳಡಿ ಸ್ವಂತ ನಿವೇಶನದಲ್ಲಿ ಹಾಗೂ ಸರ್ಕಾರದಿಂದ ನಿವೇಶನ ಪಡೆದು ಸಾಲ/ಸಹಾಯಧನ ವೈಯಕ್ತಿಕ ಅನುದಾನದಿಂದ ಮನೆ ನಿರ್ಮಿಸಿಕೊಂಡು ವಾಸವಾಗಿದ್ದು 10 ವರ್ಷಗಳ ಅವಧಿ ಪೂರ್ಣಗೊಳಿಸಿದ ನಂತರ ಮನೆ/ನಿವೇಶನ ಅಡಮಾನವನ್ನು ಡೀಮ್ಡ್ ರಿಲೀಸ್ ಎಂದು ಪರಿಗಣಿಸಿ ಆರ್.ಟಿ.ಸಿ/ಆಸ್ತಿ ವಹಿಯಲ್ಲಿ ಋಣ ಮುಕ್ತಗೊಳಿಸುವಂತೆ ಆದೇಶಿಸಲಾಗಿದೆ. |

ಸಂಖ್ಯೆ: ವಇ 526 ಹೆಚ್‌ಎಎಂ 2025

B. Zmeer

**(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)**

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ

ಕಲ್ಯಾಣ ಸಚಿವರು

| LCQ-1328 | ಅನುಬಂಧ-1 | |
|---|---|---|
| **ಕಡಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಭಾರೆ ಮಾಡಲಾದ ಫಲಾನುಭವಿಗಳ ವಿವರ** | | |
| **ಕ್ರ.ಸಂ** | **ಫಲಾನುಭವಿಯ ಹೆಸರು** | **ಪರಭಾರೆ ಮಾಡಲಾದ ದಿನಾಂಕ** |
| 1 | ಶೀಲಾ | 27.10.2022 |
| 2 | ಕೆಂಪಮ್ಮ | 27.10.2022 |
| 3 | ಶಬೀರ್ | 12.01.2022 |
| 4 | ಅಖೀಲಾ ಬೇಗಂ | 01.12.2022 |
| 5 | ಜಯಮ್ಮ | 27.12.2022 |
| 6 | ಜೋಬ್ ರಾಜ್ | 27.12.2022 |
| 7 | ವಿಜಯಶಾಂತಿ | 05.01.2022 |
| 8 | ಮುರುಘಮ್ಮ | 03.01.2024 |
| 9 | ಜ್ಞಾನ ಸೇಲ್ವಿ | 03.01.2024 |
| 10 | ಶೋಭಾ ಎಸ್ | 02.09.2024 |
| 11 | ಪೂರ್ಣಿಮ | 04.10.2024 |



File No. DOH/526/HAM/2025-HSD 2-Housing SECRETARIAT (Computer No. 1993978)
Generated from eOffice by UMESH S A, DOH-Hou2IncAsst2(U), SENIOR ASSISTANT, HOUSING SECRETARIAT on 21/01/2026 11:13 AM